ದಿನಾಂಕ 18-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃವಾದಿ ಪರ ಮೇಡಮ್ ಜೆ.ಹೆಚ್.ಡಿ. ವಕೀಲರವರಿಂದಃ**

ದಿನಾಂಕ 21.02.1922 ರ ಕ್ರಯ ಪತ್ರದ ಮೂಲ ಪ್ರತಿಯನ್ನು ಈಗಾಗಲೇ ನಿಪಿ.3 ಎಂದು ಗುರ್ತಿಸಲಾಗಿದ್ದು, ನಿಪಿ.3 ರಲ್ಲಿರುವ ಬರವಣಿಗೆ ಸ್ಪಷ್ಟವಾಗಿ ಕಾಣುತ್ತಿಲ್ಲವೆಂದು ಹಿಂದಿನ ನ್ಯಾಯಾಧೀಶರು ಸೂಚಿಸಿದ್ದ ಮೇರೆಗೆ ಈ ದಿನ ವಾದಿಯವರ ಪರ ಗೌರವಾನ್ವಿತ ವಕೀಲರು ಅದರ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತಾರೆ. ಸಾಕ್ಷಿಯವರು ಸದ್ರಿ ಕ್ರಯಪತ್ರದ ದೃಢೀಕೃತ ನಕಲನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ.3(ಎ) ಎಂದು ಗುರ್ತಿಸಲಾಯಿತು. ದಿನಾಂಕ 16.06.1989 ರ ವಿಭಾಗ ಪತ್ರದ ಮೂಲ ಪ್ರತಿಯು ಎಲ್ಲಿ ಇದೆ ಎಂದು ನನಗೆ ತಿಳಿದಿಲ್ಲ. ಆದ್ದರಿಂದ ಅದರ ದೃಢೀಕೃತ ನಕಲನ್ನು ಸಲ್ಲಿಸಿರುತ್ತೇನೆ ಅದನ್ನು ನಿಪಿ.22 ಎಂದು ಗುರ್ತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿಯವರ ಪರ ಗೌರವಾನ್ವಿತ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.